ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೈಲಹೊಂಗಲ.

ಸಿ.ಸಿ.ನಂ.**345/2021**

ಬೈಲಹೊಂಗಲ ಪೊಲೀಸ ಠಾಣೆ

ಪಿರ್ಯಾದುದಾರರು .

// ವಿರುದ್ಧ //

1.ಯಲ್ಲಪ್ಪ ಕರಬನ್ನವರ ಹಾಗೂ ಇತರರು

ಆರೋಪಿತರು.

ದೋಷಾರೋಪಣೆ

ನಾನು ಮನು ಶರ್ಮಾ ಎಸ್.ಪಿ ಬಿ.ಎ.ಎಲ್.ಎಲ್.ಬಿ.ಎಲ್.ಎಲ್.ಎಂ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

1. ಯಲ್ಲಪ್ಪ ಕರಬನ್ನವರ
2. ಕಲಾವತಿ ಸಿದ್ದಪ್ಪ ಕರಬನ್ನವರ
3. ಸೂರಪ್ಪ ಬನಾಜಿ

ಎಲ್ಲರೂ ಸಾಃ ಗದ್ದಿಕರವಿನಕೊಪ್ಪ ತಾಃ ಬೈಲಹೊಂಗಲ.

ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.

ಅಭಿಯೋಜನೆಯವರು ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ಬೈಲಹೊಂಗಲ ಗದ್ದಿಕರವಿನಕೊಪ್ಪ ಗ್ರಾಮದಲ್ಲಿ ವಾಸಿಸುವ ಆರೋಪಿತರಾದ ನೀವು ಮತ್ತು ಪಿರ್ಯಾದುದಾರರು ಸಂಬಂದಿಕರು ಇದ್ದು ನಿಮ್ಮ ಮತ್ತು ಪಿರ್ಯಾದುದಾರರ ನಡುವೆ ವಾಟ್ನಿ ಸಲುವಾಗಿ ತಂಟೆ ತಕರಾರು ಇದ್ದು ಅದೇ ಸಿಟ್ಟನಿಂದ ದಿ. 01-03-2020 ರಂದು 17-30 ಗಂಟೆ ಸಮಯದಲ್ಲಿ ಪಿರ್ಯಾದಿ ಹಾಗೂ ಸಾಕ್ಷಿದಾರರೊಂದಿಗೆ ಜಗಳ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತೆತೆಗೆ ಭಂಗವನ್ನುಂಟು ಮಾಡಿ ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.504 ಸಹ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ಪಿರ್ಯಾದಿ ಹಾಗೂ ಸಾಕ್ಷಿದಾರರೊಂದಿಗೆ ಜಗಳ ತೆಗೆದು

ಪಿರ್ಯಾದಿಯ ಚೂಡಿದಾರದ ಟಾಪ್ ಹಿಡಿದು ಎಳೆದಾಡಿ ಅವಮಾನ ಪಡಿಸಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.354 ಸಹ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ಪಿರ್ಯಾದಿ ಹಾಗೂ ಸಾಕ್ಷಿದಾರರೊಂದಿಗೆ ಜಗಳ ತೆಗೆದು ಅವರಿಗೆ ಕೈಯಿಂದ ಹೊಡೆಬಡೆ ಮಾಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.323 ಸಹ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು ಬಂದು ಪಿರ್ಯಾದಿ ಹಾಗೂ ಸಾಕ್ಷಿದಾರರೊಂದಿಗೆ ಜಗಳ ತೆಗೆದು ಅವರಿಗೆ ಜೀವದ ಬೆದರಿಕೆ ಹಾಕಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.506 ಸಹ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಪ್ರಶ್ನೆ 1. ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ.ಆ- 1 ರಿಂದ 3

ಪ್ರಶ್ನೆ 2.ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ. ಆ- 1 ರಿಂದ 3

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ದಿನಾಂಕ.18.08.2022 ಪ್ರ.ದ.ನ್ಯಾದಂ.ಬೈಲಹೊಂಗಲ